

ಕಂಡನಾ ಹುಲಿರಾಯನು

ಇದ್ದದ್ದು. ಇಲ್ಲಿರುವ ಬಂಗಾಲಿ ಟೈಗರ್‌ಗಳಷ್ಟೇ ಎತ್ತರದ ಆನೆಗಳೂ ಕೂಡ ಫೋಟೋಗ್ರಫಿ ಮಾಡುವ ಜನರಿಗೆ ಇಷ್ಟವಾಗುತ್ತವೆ. ಇಲ್ಲಿಗೆ ಹೋಗುವವರು ಹಲವು ತಿಂಗಳ ಮೊದಲೇ ಯೋಜಿಸಿ ಬುಕ್ ಮಾಡಿಕೊಳ್ಳಬೇಕು. ಪ್ರವೇಶದ ಅವಕಾಶ ನಿಯಂತ್ರಿತವಾಗಿರುವ ಕಾರಣ ಬೇಡಿಕೆ ಇಲ್ಲಿ ಹೆಚ್ಚು. ಜತೆಗೆ ಎರಡು ದಿನಕ್ಕಿಂತ ಹೆಚ್ಚಿಗೆ ಯಾರಿಗೂ ಉದ್ಯಾನವನದಲ್ಲಿ ಇರಗೊಡುವುದಿಲ್ಲ.

ದೆಹಲಿಯಿಂದ ಹೊರಟ ನಮ್ಮ ರೈಲು ಬೆಳಗ್ಗೆ ಐದು ಗಂಟೆಗೆ ನಮ್ಮನ್ನು ರಾಮನಗರದಲ್ಲಿ ತಂದು ಕೆಡವಿತು. ಅದು ರೈಲಿನ ಕೊನೆಯ ನಿಲ್ದಾಣ. ತೆಳ್ಳನೆಯ ಬಿಳಿ ಮೋಡಗಳಾಗಿ ಸುಯ್ದಾಡುತ್ತಿದ್ದ ತೇವದ ಮಂಜು ಮುಖಕ್ಕೆ ರಾಚಿದಾಗ ಥರಥರ ನಡುಗತೊಡಗಿದೆವು. ಮೆದುಳು ಅಲ್ಲಾಡಿಸುವಷ್ಟು ಚಳಿ ತೀವ್ರವಾಗಿತ್ತು. ನಾವು ಹಾಕಿಕೊಂಡಿದ್ದ ಸ್ವೆಟರು, ಮಂಕಿ ಟೋಪಿಗಳ ಸೀಳಿಕೊಂಡು ಚಳಿ ಮುನ್ನುಗ್ಗುತ್ತಿತ್ತು. ಇದಕ್ಕೊಂದು ಕಾರಣವೂ ಇತ್ತು. ಡಿಸೆಂಬರ್ ಮತ್ತು ಜನವರಿ ತಿಂಗಳಲ್ಲಿ ಹಿಮಾಲಯ ಭಾಗದಲ್ಲಿ ಹಿಮಪಾತವಾದ ಕೂಡಲೇ ಅಲ್ಲಿನ ಚಳಿಗಾಳಿ ಇತ್ತ ಬೀಸಿ ಮಳೆಯಾಗತೊಡಗುತ್ತದೆ. ಹಿಮಾಲಯದ ಮಂಜಿನ ಮೋಡಗಳು ಇತ್ತ ಕಡೆಗೆ ನುಗ್ಗುವ ಕಾರಣ ಸಹಜವಾಗಿಯೇ ಶೀತ ಹೆಪ್ಪುಗಟ್ಟಿರುತ್ತದೆ.

ನಮ್ಮನ್ನು ಕರೆದೊಯ್ಯಲು ಬಂದಿದ್ದ ಆದಿಲ್ ಎಂಬಾತ ತುಂಬಾ ಚತುರ, ತಿಳಿವಳಿಕೆಯ ವ್ಯಕ್ತಿ. ನಮ್ಮ ಪ್ರವಾಸದ ಏರ್ಪಾಡೆಲ್ಲ ಮಾಡಿದ್ದವನು ಅವನೇನೆ! ಆದರೆ ಆತ, ‘ನೀವು ಎಲ್ಲೂ ತಡ ಮಾಡುವಂತಿಲ್ಲ, ಬೇಗ ಹೊರಡಬೇಕು’ ಎಂದು ಅವಸರ ಮಾಡಿದ್ದು ನಮಗಿಷ್ಟವಾಗಲಿಲ್ಲ. ನಾವು ಪ್ರಯಾಣದ ಆಯಾಸ ಬಗೆಹರಿಯುವಷ್ಟು ರೆಸ್ಟ್ ತೆಗೆದುಕೊಳ್ಳುವ ಮೂಡಿನಲ್ಲಿದ್ದೆವು. ಆದರೆ ಅವನಿಗೆ ಬೇರೆಯೇ ದುಗುಡವಿತ್ತು. ‘ಸರ್ ನಾಳೆ ನಾಡಿದ್ದು ಮಳೆಯಾಗುವ ಸಂಭವವಿದೆ. ಮಳೆಯಾದರೆ ಹುಲಿಗಳು ಸಿಗುವುದು ಕಷ್ಟ.

